2017 ಕ.ತೀ.ವ 678

## ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಅರವಿಂದ್ ಕುಮಾರ್

## ರಾಜನಾಯ್ಕ–ವಿರುದ್ಧ– ಉಮೇಶ್ ಮತ್ತು ಮತ್ತೊಬ್ಬರು*

ಭಾರತ ಸಂವಿಧಾನದ 227ನೇ ಅನುಚ್ಛೇದದಡಿಯಲ್ಲಿ ಈ ರಿಟ್ ಅರ್ಜಿ.

**ವಾದಿಯು ತಾನು ಪ್ರತಿವಾದಿಗಳಾದ 1 ಮತ್ತು 2ರ ವಿವಾಹಬಂಧನದಿಂದ ಹುಟ್ಟಿದೆನೆಂದು ವಾದಿಸಿ ಪಾಲಿಗಾಗಿ ಮತ್ತು ದಾವಾ ಅನುಸೂಚಿ ಸ್ವತ್ತುಗಳ ಸ್ವಾಧೀನತೆಗಾಗಿ ಜೊತೆಗೆ ದಾವಾ ಅನುಸೂಚಿ ಸ್ವತ್ತುಗಳು ಪೂರ್ವಜರ ಸ್ವತ್ತಾಗಿದ್ದು, ತನ್ನ ಪಾಲಿಗಾಗಿ ಮತ್ತು 1/3 ಭಾಗದ ಪ್ರತ್ಯೇಕ ಸ್ವಾಧೀನತೆಗೆ ದಾವೆಯನ್ನು ಹೂಡಿದ್ದಾನೆ.**

**ಮೇಲ್ನೋಟಕ್ಕೆ ಸಾಬೀತುಪಡಿಸದಿರುವ ಸಂಗತಿಯನ್ನು ಪರಿಗಣಿಸದೆ ಅಧಿವಿಚಾರಣಾ ನ್ಯಾಯಾಲಯವು ರಿಟ್ ಅರ್ಜಿದಾರನನ್ನು ತಾನಾಗಿಯೇ ಡಿಎನ್ಎ ಪರೀಕ್ಷೆಗೆ ಒಳಪಡಬೇಕೆಂದು ನಿರ್ದೇಶಿಸುವಂತಿಲ್ಲವೆಂದು ಹಾಗೆಯೇ ಅಧಿವಿಚಾರಣಾ ನ್ಯಾಯಾಲಯವು ನೀಡಿರುವ ಕಾರಣಗಳು ಸಹಾ ಸಂಗತಿಗಳಿಗೆ ವಿರುದ್ಧವಾಗಿವೆಯೆಂದು ಈ ರಿಟ್ ಅರ್ಜಿಯನ್ನು ಪುರಸ್ಕರಿಸಲಾಗಿದೆ.**

| *ಉಲ್ಲೇಖಿಸಲಾದ ಮೊಕದ್ದಮೆಗಳು* | *ಪ್ಯಾರಾಗಳಲ್ಲಿ* |
|---|---|
| *1. ಎಐಆರ್ 1993 ಎಸ್‌ಸಿ 2295 ಗೌತಮ್ ಕುಂದ್ –ವಿರುದ್ಧ – ಪಶ್ಚಿಮ ಬಂಗಾಳ ರಾಜ್ಯ ಮತ್ತು ಮತ್ತೊಬ್ಬರು* | *(ಉಲ್ಲೇ) 9* |
| *2. (2005) 4 ಎಸ್‌ಸಿಸಿ 449 ಬನಾರಸಿ ದಾಸ್ –ವಿರುದ್ಧ– ಟೀಕು ದತ್ತಾ (ಶ್ರೀಮತಿ) ಮತ್ತು ಇನ್ನೊಬ್ಬರು* | *(ಉಲ್ಲೇ) 10* |

*ರಿಟ್ ಅರ್ಜಿ ಸಂಖ್ಯೆ: 3950/2015 (ಜಿಎಂ–ಸಿಪಿಸಿ), ದಿನಾಂಕ: 3ನೇ ಡಿಸೆಂಬರ್, 2015.

*3. ಎಐಆರ್ 2003 ಎಸ್‌ಸಿ 3450(1)*
*ಶಾರದ -ವಿರುದ್ಧ- ಧರ್ಮಪಾಲ್ (ಉಲ್ಲೇ) 11*

ಅರ್ಜಿದಾರರ ಪರ: ಲೂರ್ದು ಮರಿಯಪ್ಪ, ಎ. ವಕೀಲರು.
ಪ್ರತ್ಯರ್ಜಿದಾರರ ಪರ: ಶ್ರೀ ಎಸ್. ವಿಕ್ಟರ್ ಮನೋಹರನ್, ವಕೀಲರು.

## ಆದೇಶ

**ನ್ಯಾಯಮೂರ್ತಿ ಶ್ರೀ ಅರವಿಂದ್ ಕುಮಾರ್:**

ಮೊದಲ ಪ್ರತಿವಾದಿಯು, ಭಾರತೀಯ ಸಾಕ್ಷ್ಯ ಅಧಿನಿಯಮ, 1872ರ 56ನೇ ಪ್ರಕರಣದೊಂದಿಗೆ ಮತ್ತು ಸಿವಿಲ್ ಪ್ರಕ್ರಿಯಾ ಸಂಹಿತೆಯ 151ನೇ ಪ್ರಕರಣದೊಂದಿಗೆ ಓದಲಾದ 45ನೇ ಪ್ರಕರಣದ ಮೇರೆಗೆ ಸಲ್ಲಿಸಲಾದ ಅರ್ಜಿಯನ್ನು ಪುರಸ್ಕರಿಸಿ ಮತ್ತು ವಾದಿ ಮತ್ತು 1 ಮತ್ತು 2ನೇ ಪ್ರತಿವಾದಿಗಳಿಗೆ ತಮ್ಮ ರಕ್ತ ಮಾದರಿಯನ್ನು ಸಂಗ್ರಹಿಸಲು ಮತ್ತು ಡಿಎನ್‌ಎ ಪರೀಕ್ಷೆಗೆ ಕಳುಹಿಸಲು ಸೂಚಿಸಿ, ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ಪಿರಿಯಾ ಪಟ್ಟಣ ಇವರು ಮೂಲ ದಾವೆ ಸಂ.170/2010ರಲ್ಲಿ ಮಧ್ಯಂತರ ಅರ್ಜಿ (ಐ.ಎ.) ಸಂ.7ರಲ್ಲಿ ಹೊರಡಿಸಿದ ದಿನಾಂಕ 03.12.2014ರ ಆದೇಶದಿಂದ ಬಾಧಿತರಾಗಿದ್ದು ಈ ನ್ಯಾಯಾಲಯದ ಮುಂದೆ ಬಂದಿರುತ್ತಾರೆ.

2. ಅರ್ಜಿದಾರರ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರಾದ ಶ್ರೀ ಲೂರ್ದು ಮರಿಯಪ್ಪ ಮತ್ತು ಎದುರುದಾರ-1ರ ಪರವಾಗಿ ಹಾಜರಾಗಿರುವ ಮಾನ್ಯ ಶ್ರೀ ವಿಕ್ಟರ್ ಮನೋಹರನ್‌ರವರ ವಾದಗಳನ್ನು ಆಲಿಸಲಾಗಿದೆ. ದಾಖಲೆಗಳನ್ನು ಅವಲೋಕಿಸಲಾಗಿದೆ.

3. ವಾದಿಯು ತಾನು ಪ್ರತಿವಾದಿಗಳಾದ 1 ಮತ್ತು 2ರ ವಿವಾಹಬಂಧನದಿಂದ ಹುಟ್ಟಿದ್ದೆನೆಂದು ವಾದಿಸಿ ಪಾಲಿಗಾಗಿ ಮತ್ತು ದಾವಾ ಅನುಸೂಚಿ ಸ್ವತ್ತುಗಳ

ಸ್ವಾಧೀನತೆಗಾಗಿ ದಾವಾ ಅನುಸೂಚಿ ಸ್ವತ್ತುಗಳು ಪೂರ್ವಜರ ಸ್ವತ್ತಾಗಿದ್ದು, ತನ್ನ ಪಾಲಿಗೆ ಮತ್ತು 1/3 ಭಾಗದ ಪ್ರತ್ಯೇಕ ಸ್ವಾಧೀನತೆಗೆ ದಾವೆಯನ್ನು ಹೂಡಿದ್ದಾನೆ. ಮೊದಲ ಪ್ರತಿವಾದಿಯು ಹಾಜರಾಗಿ ತನ್ನ ಲಿಖಿತ ಹೇಳಿಕೆಯನ್ನು ಸಲ್ಲಿಸಿರುವುದಲ್ಲದೆ, ವಾದಪತ್ರದಲ್ಲೂ ನೀಡಲಾದ ದೃಢೋಕ್ತಿಗಳನ್ನು ನಿರಾಕರಿಸಿದ್ದಾರೆ. ಆದರೆ ಮತ್ತೊಂದು ಕಡೆ ಅವನು ಶ್ರೀಮತಿ ಜಯಂತಿ ಎಂಬೊಬ್ಬರನ್ನು ವಿವಾಹವಾಗಿದ್ದು, ಸದರಿ ವಿವಾಹದಿಂದ ಅವನಿಗೆ ಇಬ್ಬರು ಮಕ್ಕಳಿದ್ದು ಅವರು ದಾವಾ ಸ್ವತ್ತಿನಲ್ಲಿ ಭಾಗಕ್ಕೆ ಹಕ್ಕುಳ್ಳವರಾಗಿದ್ದಾರೆ ಮತ್ತು ವಾದಿಯು ಹಕ್ಕುಳ್ಳವನಾಗಿರುವುದಿಲ್ಲ. ಎರಡನೇ ಪ್ರತಿವಾದಿಯು ಅಧಿವಿಚಾರಣಾ ನ್ಯಾಯಾಲಯದ ಮುಂದೆ ಹಾಜರಾಗಿರುವುದಿಲ್ಲ. ಹಾಗಾಗಿ ಅವಳನ್ನು ಏಕಪಕ್ಷೀಯವಾಗಿ ಇಡಲಾಗಿದೆ.

4. ಪಕ್ಷಕಾರರ ವಾದಗಳ ಆಧಾರದ ಮೇಲೆ, ಅಧಿವಿಚಾರಣಾ ನ್ಯಾಯಾಲಯವು, ವಿಷಯಗಳನ್ನು ರೂಪಿಸಿದ್ದು, ಪಕ್ಷಕಾರರು ತಮಗೆ ಸಂಬಂಧಪಟ್ಟ ಕ್ಲೇಮುಗಳನ್ನು ಸಮರ್ಥಿಸಲು ಮತ್ತು ಸಂಗತಿಗಳನ್ನು ರುಜುವಾತುಪಡಿಸಲು ಅಧಿವಿಚಾರಣೆಗೆ ಒಳಗಾಗಿದ್ದರು. ಇದರ ಮೇರೆಗೆ ಸಂಬಂಧಪಟ್ಟ ಪಕ್ಷಕಾರರ ಮೇಲೆ ಹೊರೆಯನ್ನು ಹಾಕಲಾಗಿದೆ. ಅಧಿವಿಚಾರಣೆಯು ಮುಕ್ತಾಯಗೊಂಡ ನಂತರ ಅಂತಿಮ ವಾದಗಳಿಗಾಗಿ ವಿಷಯವನ್ನು ಇತ್ಯರ್ಥದಲ್ಲಿರುವಾಗ, ಸಾಕ್ಷ್ಯಗಳ ಅಧಿನಿಯಮ, 1872ರ 56ನೇ ಪ್ರಕರಣದೊಂದಿಗೆ ಓದಲಾದ 45ನೇ ಪ್ರಕರಣದ ಮೇರೆಗೆ ಮತ್ತು ಸಿವಿಲ್ ಪ್ರಕ್ರಿಯಾ ಸಂಹಿತೆಯ 151ನೇ ಪ್ರಕರಣದ ಮೇರೆಗೆ ವಾದಿಯು, ವಾದಿಯ ಪಿತೃತ್ವವನ್ನು ಅವನು ನಿರಾಕರಿಸಿದ್ದರಿಂದ ಡಿಎನ್ಎ ಪರೀಕ್ಷೆಗೆ ಕಳುಹಿಸಲು ಬಹಿರಂಗ ನ್ಯಾಯಾಲಯದಲ್ಲಿ ವೈದ್ಯಕೀಯ ಅಧಿಕಾರಿಯ ಸಮ್ಮುಖದಲ್ಲಿ ರಕ್ತ ಮಾದರಿಗಳನ್ನು ನೀಡಲು ಮೊದಲ ಪ್ರತಿವಾದಿಗೆ ನಿರ್ದೇಶಿಸಬೇಕೆನ್ನುವ ಕೋರಿಕೆಯೊಂದಿಗಿನ ಅನುಬಂಧ –ಸಿ ಯ ಪ್ರಕಾರ ಅರ್ಜಿಯನ್ನು ಸಲ್ಲಿಸಿದ್ದಾನೆ. ಅಧಿವಿಚಾರಣಾ ನ್ಯಾಯಾಲಯವು ಎದುರು ವಾದಗಳನ್ನು ಪರಿಗಣಿಸಿದ ತರುವಾಯ ಮತ್ತು ಪರಿಗಣನೆಯಲ್ಲಿ ಸಾಕ್ಷ್ಯ ಅಧಿನಿಯಮ, 1872ರ 112ನೇ ಪ್ರಕರಣವನ್ನು ಗಮನಕ್ಕೆ ತೆಗೆದುಕೊಂಡು ಅರ್ಜಿಯಲ್ಲಿ ಪ್ರಶ್ನಿಸಲಾಗಿರುವ ಅನುಬಂಧ–ಇ ನ ದಿನಾಂಕ 03.12.2014ರ ಪ್ರಶ್ನಿತ ಆದೇಶದ ಮೂಲಕ ಅರ್ಜಿಯನ್ನು ಪುರಸ್ಕರಿಸಿದೆ.

5. ಅರ್ಜಿದಾರರ ಪರ ಹಾಜರಾದ ಮಾನ್ಯ ನ್ಯಾಯವಾದಿ ಲೂರ್ದು ಮರಿಯಪ್ಪನವರ ವಾದವೇನೆಂದರೆ, ವಾದಿಯು, ಮೊದಲನೆ ಮತ್ತು ಎರಡನೇ ಪ್ರತಿವಾದಿಗಳ ನಡುವೆ ವಿದ್ಯುಕ್ತವಾಗಿ ನಡೆದಿರುವ ವಿವಾಹವನ್ನು ಮೇಲ್ನೋಟಕ್ಕೂ ಸಹಾ ಸಾಬೀತುಪಡಿಸದಿರುವ ಸಂಗತಿಯನ್ನು ಪರಿಗಣಿಸದೆ ಅಧಿವಿಚಾರಣಾ ನ್ಯಾಯಾಲಯವು ಮೊದಲ ಪ್ರತಿವಾದಿ ಅಂದರೆ, ರಿಟ್ ಅರ್ಜಿದಾರನನ್ನು ತಾನಾಗಿಯೇ ಡಿಎನ್ಎ ಪರೀಕ್ಷೆಗೆ ಒಳಪಡಬೇಕೆಂದು ನಿರ್ದೇಶಿಸುವಂತಿಲ್ಲವೆಂದು ಮತ್ತು ಅಂತೆಯೇ ಅಧಿವಿಚಾರಣಾ ನ್ಯಾಯಾಲಯವು ನೀಡಿರುವ ಕಾರಣಗಳು ಸಹಾ ಸಂಗತಿಗಳಿಗೆ ವಿರುದ್ಧವಾಗಿರುವುದರಿಂದ ಇದನ್ನು ರದ್ದುಗೊಳಿಸಬೇಕೆಂಬುದಾಗಿದೆ. ವಾದಿಯು ನಿರ್ವಹಿಸದಿರುವ ಪ್ರಾರಂಭಿಕ ಹೊರೆಯ ಕಾರಣದಿಂದ ರಿಟ್ ಅರ್ಜಿದಾರ- ಮೊದಲ ಪ್ರತಿವಾದಿಯು, ವಾದಿಯ ಪಿತೃತ್ವವನ್ನು ಖಚಿತಪಡಿಸಲು ಅಥವಾ ಮತ್ತೊಂದು ಕಡೆ ಅವನು ಮೊದಲ ಪ್ರತಿವಾದಿಯ ಮಗನಾಗಿದ್ದಾನೆಯೇ ಎಂಬ ಬಗ್ಗೆ ದೃಢಪಡಿಸಲು ಡಿಎನ್ಎ ಪರೀಕ್ಷೆಯನ್ನು ನಡೆಸುವುದಕ್ಕಾಗಿ ರಕ್ತಮಾದರಿಯನ್ನು ನೀಡಬೇಕೆಂಬುದನ್ನು ವಿಚಾರಣೆಗೊಳಪಡಿಸಲು ಸಾಧ್ಯವಿಲ್ಲ. ಅವನ ಸಲ್ಲಿಕೆಗಳನ್ನು ಸಮರ್ಥಿಸಲು ಅವನು ಈ ಮುಂದಿನ ತೀರ್ಪುಗಳನ್ನು ಅವಲಂಬಿಸಿದ್ದಾರೆ:

**(1) ಎಐಆರ್ 1993 ಎಸ್‌ಸಿ 2295**
**ಗೌತಮ್ ಕುಂದು -ವಿರುದ್ಧ - ಪಶ್ಚಿಮ ಬಂಗಾಳ ರಾಜ್ಯ ಮತ್ತು ಮತ್ತೊಬ್ಬರು**

**(2) ಎಐಆರ್ 2000 ಕೆಎಆರ್ ಪುಟ 80**
**ಶ್ರೀಮತಿ ನಿಂಗಮ್ಮ ಮತ್ತು ಮತ್ತೊಬ್ಬರು -ವಿರುದ್ಧ- ಚಿಕ್ಕಯ್ಯ ಮತ್ತು ಮತ್ತೊಬ್ಬರು**

**(3) (2005) 4 ಎಸ್‌ಸಿಸಿ 449**
**ಬನಾರಸಿ ದಾಸ್ -ವಿರುದ್ಧ- ಟೀಕು ದತ್ತಾ (ಶ್ರೀಮತಿ) ಮತ್ತು ಮತ್ತೊಬ್ಬರು.**

6. ಮತ್ತೊಂದು ಕಡೆಯಲ್ಲಿ 1ನೇ ಎದುರುದಾರರ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರಾದ ಶ್ರೀ ವಿಕ್ಟರ್ ಮನೋಹರನ್‌ರವರು, ಪ್ರಶ್ನಿತ ಆದೇಶವನ್ನು ಬೆಂಬಲಿಸಿದ್ದಾರೆ ಮತ್ತು ಮೊದಲನೇ ಪ್ರತಿವಾದಿಯು, ವಾದಿಯು 1ನೇ ಪ್ರತಿವಾದಿ ಮತ್ತು 2ನೇ ಪ್ರತಿವಾದಿ ನಡುವಿನ ವಿವಾಹಬಂಧನದಿಂದ ಹುಟ್ಟಿಲ್ಲವೆಂಬುದನ್ನು ನಿರ್ದಿಷ್ಟವಾಗಿ ನಿರಾಕರಿಸುವಾಗ ವಾದಿಯು ಈ ಅರ್ಜಿಯನ್ನು ಸಲ್ಲಿಸುವುದು ಅತ್ಯಗತ್ಯವಾಗಿತ್ತು ಹಾಗೆಯೇ ಅಧಿವಿಚಾರಣಾ ನ್ಯಾಯಾಲಯವು, ಮೊದಲನೇ ಪ್ರತಿವಾದಿಯು ವಾದಿಯ ಪಿತೃತ್ವವನ್ನು ನಿರಾಕರಿಸಿದ್ದನು ಎಂಬ ಸಂಗತಿಯನ್ನು ಪರಿಗಣನೆಗೆ ತೆಗೆದುಕೊಂಡು ಅರ್ಜಿಯನ್ನು ಪುರಸ್ಕರಿಸಿತ್ತು ಮತ್ತು ಪ್ರಶ್ನಿತ ಆದೇಶವನ್ನು ಹೊರಡಿಸುವಲ್ಲಿ ಅಧಿವಿಚಾರಣಾ ನ್ಯಾಯಾಲಯವು ಅಧಿಕಾರ ವ್ಯಾಪ್ತಿಯ ತಪ್ಪೆಸಗಿಲ್ಲವೆಂದು ವಾದಿಸಿದ್ದಾರೆ. ಆದುದರಿಂದ ಅವನು ರಿಟ್ ಅರ್ಜಿಯನ್ನು ವಜಾಗೊಳಿಸಬೇಕೆಂದು ಕೋರಿಕೊಂಡಿದ್ದಾರೆ. ತನ್ನ ನಿವೇದನೆಯನ್ನು ಬೆಂಬಲಿಸುವಲ್ಲಿ ಈ ಮುಂದಿನ ತೀರ್ಪುಗಳನ್ನು ಅವಲಂಬಿಸಿದ್ದಾರೆ.

**(1) ಎಐಆರ್ 2003 ಎಸ್‌ಸಿ 3450(1)**
**ಶಾರದಾ –ವಿರುದ್ಧ– ಧರ್ಮಪಾಲ್**

**(2) ಎಐಆರ್ 2008 ಆಂಧ್ರ ಪ್ರದೇಶ್ 195(1)**
**ಮರದ ವೆಂಕಟೇಶ್ವರ ರಾವ್ –ವಿರುದ್ಧ–**
**ಒಲೇಟಿ ವರಲಕ್ಷ್ಮಿ ಮತ್ತು ಮತ್ತೊಬ್ಬರು**

7. ಪಕ್ಷಕಾರರ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರ ವಾದಗಳನ್ನು ಆಲಿಸಿದ್ದು, ದಾಖಲೆಗಳನ್ನು ಅವಗಾಹಿಸಿದ ಮೇಲೆ ವಾದಿಯು, ಮೊದಲ ಪ್ರತಿವಾದಿಯು ತನ್ನ ತಂದೆಯಾಗಿದ್ದಾನೆಂದು ಮತ್ತು ತಾನು ಮೊದಲ ಮತ್ತು ಎರಡನೇ ಪ್ರತಿವಾದಿಯ ನಡುವಿನ ವಿವಾಹಬಂಧನದಿಂದ ಹುಟ್ಟಿರುವೆನೆಂದು ವಾದಿಸಿ ಜೊತೆಗೆ, ತನ್ನ ಪಾಲಿಗಾಗಿ ದಾವೆಯನ್ನು ಹೂಡಿರುವುದನ್ನು ಇದು ಸೂಚಿಸುತ್ತದೆ. ಇದಕ್ಕೆ ವಿರುದ್ಧವಾಗಿ ಮೊದಲನೆ ಎದುರುದಾರನು ಹಾಜರಾಗಿ ತನ್ನ ಲಿಖಿತ ಹೇಳಿಕೆಯಲ್ಲಿ, ಎರಡನೇ ಎದುರುದಾರರೊಂದಿಗಿನ ತನ್ನ ಸಂಬಂಧವನ್ನು ಮತ್ತು

ಅಂಥ ಆಪಾದಿತ ವಿವಾಹ ಬಂಧನದಿಂದ ವಾದಿಯು ಹುಟ್ಟಿರುವುದನ್ನು ನಿರಾಕರಿಸಿದ್ದಾನೆ ಅವನು ನಿರ್ದಿಷ್ಟವಾಗಿ, ತಾನು ಶ್ರೀಮತಿ ಜಯಂತಿ ಎಂಬೊಬ್ಬರನ್ನು ವಿವಾಹವಾಗಿರುವೆನೆಂದು ಮತ್ತು ಸದರಿ ವಿವಾಹಬಂಧನದಿಂದ ತನಗೆ ಇಬ್ಬರು ಗಂಡು ಮಕ್ಕಳಿರುವರೆಂದು ವಾದಿಸಿದ್ದಾನೆ.

8. ಸಾಕ್ಷ್ಯ ಅಧಿನಿಯಮದ 112ನೇ ಪ್ರಕರಣವು. ಯಾರೇ ವ್ಯಕ್ತಿಯು ತನ್ನ ತಾಯಿ ಮತ್ತು ಯಾರೇ ವ್ಯಕ್ತಿಯ ನಡುವಿನ ಸಿಂಧುವಾದ ವಿವಾಹ ಮುಂದುವರಿದಿರುವ ಅವಧಿಯಲ್ಲಿ ಅಥವಾ ವಿವಾಹದ ವಿಘಟನೆಯಾದ ನಂತರ 280 ದಿನಗಳೊಳಗೆ ಜನಿಸಿರುವುದನ್ನು ಸ್ಪಷ್ಟವಾಗಿ ತಿಳಿಸುತ್ತದೆ ಮತ್ತು ಈ ಅವಧಿಯಲ್ಲಿ ತಾಯಿಯು ವಿವಾಹವಾಗದೆ ಇರುವಲ್ಲಿ ಮದುವೆಯ ಪಕ್ಷಕಾರರು ಮಗು ಜನಿಸಿರುವಾಗ ಯಾವುದೇ ಸಮಯದಲ್ಲಿ ಒಬ್ಬರನ್ನೊಬ್ಬರು ಸೇರಿರದಿರುವುದನ್ನು ಇದು ತೋರಿಸಿದ್ದ ಹೊರತು ಅವನು ಔರಸ ಪುತ್ರನಾಗಿರುವನು ಎನ್ನುವ ನಿರ್ಣಾಯಕ ರುಜುವಾತು ಆಗಿರತಕ್ಕದ್ದು.

9. ಮೇಲೆ ಉಲ್ಲೇಖಿಸಲಾದ ***ಗೌತಮ್ ಕುಂದ್ -ವಿರುದ್ಧ- ಪಶ್ಚಿಮ ಬಂಗಾಳ ರಾಜ್ಯ ಮತ್ತು ಮತ್ತೊಬ್ಬರು*** [1] ರವರ ಪ್ರಕರಣದಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು, ವ್ಯಕ್ತಿಯು ಆತನ ತಾಯಿ ಮತ್ತು ಯಾವುದೇ ವ್ಯಕ್ತಿ ನಡುವೆ ಸಿಂಧುವಾದ ವಿವಾಹ ಮುಂದುವರಿಯುತ್ತಿರುವ ಅವಧಿಯಲ್ಲಿ ಹುಟ್ಟಿದ್ದರೆ, ಅವನು ಅಂಥ ವಿವಾಹದಿಂದ ಹುಟ್ಟಿದ ಔರಸ ಪುತ್ರನಾಗಿರುವನು ಎನ್ನುವ ನಿರ್ಣಾಯಕ ರುಜುವಾತನ್ನು ತೆಗೆದುಕೊಳ್ಳತಕ್ಕದ್ದು ಎಂಬುದನ್ನು ಸಾಕ್ಷ್ಯ ಅಧಿನಿಯಮದ 112ನೇ ಪ್ರಕರಣವು ವಿಧಿಸುತ್ತದೆ ಎಂಬುದನ್ನು ಎತ್ತಿ ಹಿಡಿದಿದೆ. ಮತ್ತೊಂದು ಕಡೆ ಮಗುವಿನ ಔರಸತೆಯ ಸಂಬಂಧ ಪೂರ್ವಭಾವನೆ ಉದ್ಭವಿಸುತ್ತದೆ. ಮಗುವಿನ ಔರಸತೆಗೆ ಸಂಬಂಧಿಸಿದಂತೆ ಎಲ್ಲಾ ಪೂರ್ವಭಾವನೆಗಳನ್ನು ನಿರಾಕರಿಸಲಾಗುತ್ತದೆ. ಹಾಗೆಯೇ ಸಾಕ್ಷ್ಯ ಅಧಿನಿಯಮದ 112ನೇ ಪ್ರಕರಣವು, ಪಕ್ಷಕಾರನು ತನ್ನ ಹೆಂಡತಿ ಅಥವಾ ಹೆಂಗಸನ್ನು ಕೂಡಿರಲಿಲ್ಲವೆಂದು ಸಂದರ್ಭಾನುಸಾರ, ಪೂರ್ವಭಾವನೆಯನ್ನು ಹೋಗಲಾಡಿಸುವ ಸಲುವಾಗಿ ರುಜುವಾತುಪಡಿಸುವುದನ್ನು ಪಿತೃತ್ವವು

1. ಎಐಆರ್ 1993 ಎಸ್‌ಸಿ 2295

ವಿವಾದಯುತವಾಗಿರುವುದನ್ನು ಅಗತ್ಯಪಡಿಸುತ್ತದೆ ಅಥವಾ ಮತ್ತೊಂದು ಕಡೆ ಸಾಕ್ಷ್ಯ ಅಧಿನಿಯಮದ 112ನೇ ಪ್ರಕರಣದ ಮೇರೆಗೆ ಉದ್ಭವವಾಗಿರುವಂಥ ಪೂರ್ವ ಭಾವನೆಯನ್ನು, ಅಂಥ ಹೆಂಗಸನ್ನು ಕೂಡದಿರುವುದನ್ನು ತೋರಿಸಲು ಸಾಕ್ಷ್ಯ ನೀಡುವ ಮೂಲಕ ನಿರಾಕರಿಸಬಹುದಾಗಿದೆ. ಸರ್ವೋಚ್ಚ ನ್ಯಾಯಾಲಯವು ಅಭಿಪ್ರಾಯಪಡುವಂತೆ ಸೇರುವಿಕೆ ಹಾಗೂ ಸೇರಿಲ್ಲದಿರುವುದು ಎಂಬುದು ಲೈಂಗಿಕ ಸಂಪರ್ಕದ ಅವಕಾಶ ಇರುವುದು ಅಥವಾ ಇಲ್ಲದಿರುವುದಾಗಿದೆ. ಹಾಗೆಯೇ ಸಾಕ್ಷ್ಯ ಅಧಿನಿಯಮದ 112ನೇ ಪ್ರಕರಣದ ಮೇರೆಗೆ ಸೂಚಿಸಲಾದಂತೆ ಕಾನೂನುಬದ್ಧ ಮದುವೆ ಮೂಲಕ ಹುಟ್ಟಿದ ಮಗು ಔರಸವಾಗಿದೆ ಮತ್ತು ಪಕ್ಷಕಾರರು ಒಬ್ಬರಿಗೊಬ್ಬರು ಕೂಡಿದ್ದರು ಎಂಬ ಪೂರ್ವಭಾವನೆ ಬರುತ್ತದೆ. ಈ ಪೂರ್ವಭಾವನೆಯನ್ನು ಬಲಯುತ ಸಾಕ್ಷ್ಯದ ಬಾಹುಳ್ಯದಿಂದ ಹೋಗಲಾಡಿಸಬಹುದು ಅಥವಾ ತೆಗೆದುಹಾಕಬಹುದು ಮತ್ತು ಸಾಧ್ಯತೆಗಳನ್ನು ಸರಿದೂಗಿಸುವುದರಲ್ಲಿ ಅಷ್ಟೇ ಅಲ್ಲ. ಈ ಹಿನ್ನೆಲೆಯಲ್ಲಿ ಸರ್ವೋಚ್ಚ ನ್ಯಾಯಾಲಯವು, ಭಾರತದಲ್ಲಿರುವ ನ್ಯಾಯಾಲಯಗಳು ಈ ಕ್ರಮದ ವಿಷಯವಾಗಿ ರಕ್ತ ಪರೀಕ್ಷೆಯನ್ನು ನಡೆಸಲು ಆದೇಶಿಸುವುದಿಲ್ಲ ಮತ್ತು ಅಂಥ ಕೋರಿಕೆಗಾಗಿ ಎಲ್ಲಿಯಾದರೂ ಅರ್ಜಿಗಳನ್ನು ಸಲ್ಲಿಸಿದರೆ, ವಿಚಾರಣೆಯನ್ನು ನಡೆಸುವ ಸಲುವಾಗಿ, ರಕ್ತಪರೀಕ್ಷೆ ಸಂಬಂಧ ಕೋರಿಕೆಯನ್ನು ಪುರಸ್ಕರಿಸುವುದಿಲ್ಲ ಮತ್ತು ಬಲಯುತವಾದ ಮೊದಲ ನೋಟದ ಪ್ರಕರಣವಾಗಿರಬೇಕು ಎಂದರೆ, ಸಾಕ್ಷ್ಯ ಅಧಿನಿಯಮದ 112ನೇ ಪ್ರಕರಣದ ಮೇರೆಗೆ ಉದ್ಭವಿಸುವ ಪೂರ್ವಭಾವನೆಯನ್ನು ಹೋಗಲಾಡಿಸುವ ಸಲುವಾಗಿ ಗಂಡನು ಸೇರಿರಲೇ ಇಲ್ಲವೆಂದು ರುಜುವಾತುಪಡಿಸಲೇಬೇಕಾಗಿರುತ್ತದೆ ಎಂಬುದನ್ನು ಎತ್ತಿ ಹಿಡಿದಿದೆ. ಜಾಗ್ರತೆಯ ಶಬ್ದಕ್ಕಾಗಿ ಸರ್ವೋಚ್ಚ ನ್ಯಾಯಾಲಯವು ***ಗೌತಮ್ ಕುಂದ್***ರವರ ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯವು, ನ್ಯಾಯಾಲಯಗಳು, ಮಗುವನ್ನು ಜಾರಜನೆಂದು ಅಥವಾ ತಾಯಿಯನ್ನು ಶೀಲಗೆಟ್ಟವಳೆಂದು ಕಳಂಕ ಹೊರಿಸಲಾಗುತ್ತದೆಯೇ ಎಂಬ ಬಗ್ಗೆ ರಕ್ತಪರೀಕ್ಷೆಯನ್ನು ಮಾಡಿಸುವ ಯಾವ ಸಂದರ್ಭವಿದೆ ಎಂಬ ಬಗ್ಗೆ ಪರೀಕ್ಷಿಸುವುದನ್ನು ಎಚ್ಚರಿಕೆಯಿಂದ ಮಾಡಲೇಬೇಕು ಎಂದು ಅಭಿಪ್ರಾಯಪಟ್ಟಿದೆ. ಅಂತ್ಯದಲ್ಲಿ ಇದು ಈ ಮುಂದಿನದನ್ನು ಎತ್ತಿ ಹಿಡಿದಿದೆ:

“22. ಕಾನೂನುಬದ್ಧ ವಿವಾಹಬಂಧನದ ಅವಧಿಯಲ್ಲಿ ಹುಟ್ಟಿದ ಮಗು ಔರಸವಾದುದು ಎಂಬ ಮತ್ತು ಪೋಷಕರ ನಡುವೆ ಕೂಡುವಿಕೆ ಸಂಭವಿಸಿದೆಯೆಂಬ ಕಾನೂನಿನ ಪೂರ್ವಭಾವನೆಯನ್ನು ನಿರಾಕರಿಸಬಹುದಾಗಿದೆ. ಈ ಪೂರ್ವಭಾವನೆಯನ್ನು ಅಧಿಕ ಸಾಕ್ಷ್ಯದ ಬಲಗೊಳಿಸುವ ಮೂಲಕ ಮಾತ್ರ ಹೋಗಲಾಡಿಸಬಹುದಾಗಿದೆ ಮತ್ತು ಸಾಧ್ಯತೆಗಳನ್ನು ಸಮತೋಲನಗೊಳಿಸುವುದರಿಂದ ಆಗುವುದಿಲ್ಲ.

26. ಮೇಲಿನ ಚರ್ಚೆಯಿಂದ ಇದು ಕಂಡು ಬರುತ್ತದೆ:

(1) ಭಾರತದಲ್ಲಿರುವ ನ್ಯಾಯಾಲಯಗಳು ಕ್ರಮದ ವಿಷಯವಾಗಿ ರಕ್ತಪರೀಕ್ಷೆಯನ್ನು ಆದೇಶಿಸಲು ಸಾಧ್ಯವಿಲ್ಲ;

(2) ವಿಚಾರಣೆಯನ್ನು ನಡೆಸುವ ಸಲುವಾಗಿ ಅಂಥ ಕೋರಿಕೆಗಳಿಗೆ ಸಂಬಂಧಿಸಿದಂತೆ ಅರ್ಜಿಗಳನ್ನು ಸ್ವೀಕರಿಸಿದಾಗಲೆಲ್ಲ, ರಕ್ತ ಪರೀಕ್ಷೆಗೆ ಸಂಬಂಧಿಸಿದ ಕೋರಿಕೆಯನ್ನು ಪುರಸ್ಕರಿಸಲು ಸಾಧ್ಯವಿಲ್ಲ.

(3) ಸಾಕ್ಷ್ಯ ಅಧಿನಿಯಮದ 112ನೇ ಪ್ರಕರಣದ ಮೇರೆಗೆ ಉದ್ಭವಿಸಿದ ಭಾವನೆಯನ್ನು ಹೋಗಲಾಡಿಸುವ ಸಲುವಾಗಿ ಗಂಡನು ತಾನು ಕೂಡದಿರುವುದನ್ನು ರುಜುವಾತುಪಡಿಸುವಲ್ಲಿ ಬಲಯುತವಾದ ಮೊದಲ ನೋಟದ ಸಮ್ಮತ ವಾದವಿರಲೇಬೇಕಾಗುತ್ತದೆ.

(4) ನ್ಯಾಯಾಲಯವು, ರಕ್ತ ಪರೀಕ್ಷೆಗೆ ಆದೇಶಿಸಲು ಯಾವ ಸಂದರ್ಭವಿದೆ ಎಂಬುದನ್ನು ಮಗುವನ್ನು ಜಾರಜನೆಂದು ಮತ್ತು ತಾಯಿಯನ್ನು ಶೀಲಗೆಟ್ಟವಳೆಂದು ಶಂಕಿಸಿ ಕಳಂಕ ಹೊರಿಸಲಾಗುತ್ತದೆಯೇ ಎಂಬುದನ್ನು ಎಚ್ಚರಿಕೆಯಿಂದ ಪರಿಶೀಲಿಸಬೇಕು.

(5) ವಿಶ್ಲೇಷಣೆಗಾಗಿ ಮಾದರಿ ರಕ್ತವನ್ನು ನೀಡಲು ಯಾರೊಬ್ಬರನ್ನೂ ಒತ್ತಾಯಪಡಿಸಲಾಗುವುದಿಲ್ಲ".

10. ಅರ್ಜಿದಾರರ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರು ಮೇಲೆ ಉಲ್ಲೇಖಿಸಲಾದ ***ಬನಾರಸಿ ದಾಸ್ –ವಿರುದ್ಧ– ಟೀಕ ದತ್ತಾ (ಶ್ರೀಮತಿ) ಮತ್ತು ಇನ್ನೊಬ್ಬರು*** [2], ಪ್ರಕರಣವನ್ನು ಅವಲಂಬಿಸಿದ್ದು, ***ಗೌತಮ್ ಕುಂದ್***ರವರ ಪ್ರಕರಣವನ್ನೂ ಉಲ್ಲೇಖಿಸಿದ್ದು, ಅದನ್ನು ಅನುಸರಿಸಿದ್ದಾರೆ. ಹಾಗೆಯೇ ಸದರಿ ತೀರ್ಪನ್ನು ಚರ್ಚಿಸುವ ಪ್ರಶ್ನೆಯನ್ನು ಮಾತ್ರ ಸೇರಿಸಲಾಗಿದೆ.

11. ***ಶಾರದ –ವಿರುದ್ಧ– ಧರ್ಮಪಾಲ್***[3] ಪ್ರಕರಣದಲ್ಲಿ ಎದುರುದಾರ 1ರ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರು ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು ಅವಲಂಬಿಸಿದ್ದು, ಇದು, ಅರ್ಜಿದಾರನು 82ನೇ ಕಂಡಿಕೆ ಪ್ರಕಾರ ಅಂಥ ಆದೇಶವನ್ನು ಹೊರಡಿಸುವ ಮೊದಲು ಬಲಯುತವಾದ ಮೊದಲ ನೋಟದ ಪ್ರಕರಣವನ್ನು ರುಜುವಾತುಪಡಿಸಿರುವರೆಂಬ ನಿರ್ಣಯಕ್ಕೆ ನ್ಯಾಯಾಲಯಗಳು ಬರಬೇಕು ಎಂದು ಅಭಿಪ್ರಾಯಪಟ್ಟಿದೆ ಮತ್ತು ಅಂಥ ನಿರ್ಣಯಕ್ಕೆ ಬರುವ ಮೂಲಕ ಅಂಥ ವೈದ್ಯಕೀಯ ಪರೀಕ್ಷೆಯನ್ನು ಸ್ವೀಕರಿಸಿ ಒಬ್ಬರ ಖಾಸಗಿತನದ ಹಕ್ಕನ್ನು ಉಲ್ಲಂಘಿಸಬಾರದು. ಹೀಗಾಗಿ, ಅರ್ಜಿದಾರನು ಅಂಥ ಕೋರಿಕೆಯನ್ನು ಸಲ್ಲಿಸಿರುವನೇ ಅಥವಾ ಬಲಯುತವಾದ ಮೊದಲ ನೋಟದ ಪ್ರಕರಣವನ್ನು ಲಭ್ಯಗೊಳಿಸಿರುವನೇ ಅಥವಾ ಇಲ್ಲವೇ ಎಂಬುದಕ್ಕೆ ಸಂಬಂಧಿಸಿದಂತೆ ಅಂಥ ಕೋರಿಕೆಯನ್ನು ನೀಡಲು ಪ್ರತಿಯೊಂದು ಪ್ರಕರಣದ ಸಂಗತಿಗಳನ್ನು ಅವಲಂಬಿಸಿರುತ್ತವೆ.

12. ಮುಂದಿರುವ ಸಂಗತಿಗಳನ್ನು ಅವಲೋಕಿಸುವಾಗ ಸರ್ವೋಚ್ಚ ನ್ಯಾಯಾಲಯದ ಮೇಲಿನ ಉಲ್ಲೇಖಿತ ತೀರ್ಪುಗಳಲ್ಲಿರುವ ತತ್ವಗಳನ್ನು ಗಮನದಲ್ಲಿಟ್ಟುಕೊಂಡು ಪ್ರತಿವಾದಿ 1 ಮತ್ತು 2ರ ನಡುವಿನ ವಿವಾಹಬಂಧನದಿಂದ ತಾನು ಹುಟ್ಟಿರುವುದನ್ನು ದೃಢಪಡಿಸುವ ಬದಲು ವಾದಿಯು, ವಾದಿಯ ಕ್ಲೇಮನ್ನು ಮೊದಲ ನೋಟಕ್ಕೆ ರುಜುವಾತುಪಡಿಸುವ ಇತರ ದಾಖಲೆಯನ್ನು ಮಂಡಿಸಿರುವುದಿಲ್ಲ. ಈ ಹಂತದಲ್ಲಿ, ಎದುರುದಾರನ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರು, ವಾದಿಯು ವ್ಯಾಸಂಗ ಮಾಡುತ್ತಿದ್ದಾಗ ಶಾಲೆ/ಪ್ರಾಧಿಕಾರಗಳು ಹೊರಡಿಸಿದ ವರ್ಗಾವಣೆ ಪತ್ರ ಮತ್ತು ಪ್ರತಿವಾದಿಗಳಾದ 1 ಮತ್ತು 2ರ ನಡುವೆ ವಿವಾಹ ನೆರವೇರಿದ ಆಪಾದಿತ

2. (2005) 4 ಎಸ್‌ಸಿಸಿ 444 3. ಎಐಆರ್ 2003 ಎಸ್‌ಸಿ 3450(1)

ಸಮಯದಲ್ಲಿ ಗ್ರಾಮಮಟ್ಟದಲ್ಲಿ ಪಡೆಯಲಾಗಿದೆಯೆಂದು ಹೇಳಲಾಗಿರುವ ಗ್ರಾಮಸ್ಥರು ನೀಡಿದ ಹೇಳಿಕೆಗಳಿರುವ ನಿಶಾನೆ ಪಿ–8 ಮತ್ತು ಪಿ–9ನ್ನು ಒದಗಿಸಲಾಗಿದೆ. ಒದಗಿಸಲಾಗಿರುವ ನಿಶಾನೆ ಪಿ–8ನ್ನು ಈ ನ್ಯಾಯಾಲಯವು ಅವಲೋಕಿಸಿದ್ದು, ಅರ್ಜಿದಾರರ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರು ಎತ್ತಿ ತೋರಿಸಲಾದಂತೆ, ಅರ್ಜಿದಾರನ ತಂದೆಯ ಹೆಸರಿಗೆ ಸಂಬಂಧಪಟ್ಟ ಅಂಕಣದಲ್ಲಿ ರಾಜು ನಾಯ್ಕ ಎಂದು ಸೂಚಿಸಲಾಗಿದೆ. ಮೊದಲ ನೋಟಕ್ಕೆ ಮೂಲ ಹೆಸರನ್ನು ಹೊಡೆದುಹಾಕಿದ ನಂತರ ಸದರಿ ನಮೂದು ಮಾಡಿರುವುದನ್ನು ಸೂಚಿಸುತ್ತದೆ. ಇದು ಛಾಯಾಪ್ರತಿ ಆಗಿರುವುದರಿಂದ ನಿರ್ಣಾಯಕವಾಗಿ ಬದಲಾವಣೆಯಾಗಿದೆಯೆಂದು ಮಾರ್ಪಾಟಾಗಿದೆಯೆಂದು ಅಥವಾ ಪರಿವರ್ತಿಸಲಾಗಿದೆಯೆಂದು ಅಭಿಪ್ರಾಯಪಡಲು ಸಾಧ್ಯವಾಗುವುದಿಲ್ಲ. ಈ ನ್ಯಾಯಾಲಯವು ಸದರಿ ದಸ್ತಾವೇಜನ್ನು ಪರಿವರ್ತಿಸಿರುವುದರ ಸಂಬಂಧವಾಗಲಿ ಅಥವಾ ಮಾರ್ಪಾಟು ಮಾಡಿರುವುದರ ಸಂಬಂಧವಾಗಲಿ ಏನನ್ನೂ ವ್ಯಕ್ತಪಡಿಸಿಲ್ಲ ಮತ್ತು ಈ ನ್ಯಾಯಾಲಯವು ವ್ಯಕ್ತಪಡಿಸಿದ ಯಾವುದೇ ಅಭಿಪ್ರಾಯವನ್ನು ಯಾರೇ ಪಕ್ಷಕಾರರ ಹಕ್ಕುಗಳಿಗೆ ಬಾಧಕವಾಗುವ ಸಂಭವವಿರುವಷ್ಟರ ಮಟ್ಟಿಗೆ ಅದರ ನ್ಯಾಯ ನಿರ್ಣಯ ಮಾಡುವುದು ಅಧಿವಿಚಾರಣಾ ನ್ಯಾಯಾಲಯಕ್ಕೆ ಸಂಬಂಧಪಟ್ಟಿರುತ್ತದೆ. ಇಲ್ಲಿ ಮೇಲೆ ಈ ನ್ಯಾಯಾಲಯವು ವ್ಯಕ್ತಪಡಿಸಿದ ಅಭಿಪ್ರಾಯವನ್ನು, ಆ ಸಮಯದಲ್ಲಿ ಮೊದಲ ಪ್ರತಿವಾದಿಯು ಯಾವುದೇ ವಿವಾದವಿಲ್ಲದಿರುವಾಗ ವಾದಿಯು ತಂದೆಯಾಗಿ ಯಾವಾಗಲೂ ಗುರುತಿಸಿಕೊಂಡಿರುವುದನ್ನು ಸೂಚಿಸಲು ವಾದಿಯು ಮೊದಲ ನೋಟಕ್ಕೆ ಮಾಡಿದ್ದನೇ ಎಂಬುದನ್ನು ಖಚಿತಪಡಿಸುವ ಬಗೆಗಿನ ಉದ್ದೇಶಕ್ಕೆ ಸೀಮಿತಗೊಳಿಸಿರುವುದಕ್ಕೆ ಸಂಬಂಧಪಟ್ಟಿರುತ್ತದೆಯೆಂಬುದು ಸ್ಪಷ್ಟವಾಗುತ್ತದೆ. ಈ ಒಂದು ದಸ್ತಾವೇಜನ್ನು ಓದುವ ಮೂಲಕ ಮತ್ತು ಪ್ರಶ್ನಿತ ಆದೇಶವನ್ನು ಪರಿಶೀಲಿಸುವ ಉದ್ದೇಶಕ್ಕೆ ಸೀಮಿತಗೊಳಿಸಿರುವ ಈ ಹಂತದಲ್ಲಿ ತೆಗೆದುಕೊಳ್ಳಬಹುದಾದ ನಿರ್ಣಯ ಮಾತ್ರ ಸಮಾಪ್ತಿ ಮಟ್ಟವನ್ನು ತಲುಪಿರುವುದು, ಆ ರೀತಿ ಆಗುವುದಿಲ್ಲ. ಅಲ್ಲದೆ, ಗ್ರಾಮಸ್ಥರು ಸಲ್ಲಿಸಿರುವರೆಂದು ಮತ್ತು ಪ್ರತಿವಾದಿ 1 ಮತ್ತು 2ರ ನಡುವೆ ವಿವಾಹ ನೆರವೇರಿರುವ ಸಂಗತಿಯನ್ನು ಸಾಕ್ಷ್ಯಕ್ಕೆ ದಾಖಲಿಸಲಾಗಿದೆಯೆಂದು ಹೇಳಲಾದ ನಿಶಾನೆ ಪಿ.9 ನ್ನು ಇಲ್ಲಿ ಮೇಲೆ ಈ ನ್ಯಾಯಾಲಯವು ನಿಶಾನೆ ಪಿ.8ಕ್ಕೆ ನೀಡಲಾದಂಥ ಅದೇ ಕಾರಣಕ್ಕಾಗಿ ಸಹ ಹಿಂತೆಗೆದುಕೊಳ್ಳಲಾಗಿದೆ.

13. ವಿಷಯದ ಆ ದೃಷ್ಟಿಯಿಂದ ಈ ನ್ಯಾಯಾಲಯವು, ಅಧೀನ ವಿಚಾರಣಾ ನ್ಯಾಯಾಲಯವು ಅರ್ಜಿಯನ್ನು ಸ್ವೀಕರಿಸಿರುವುದು, ಮತ್ತು ರಕ್ತ ಮಾದರಿಯನ್ನು ನೀಡಲು ಡಿಎನ್‌ಎ ಪರೀಕ್ಷೆಗೆ ಅವನನ್ನು ಕಳಿಸಲು ಮೊದಲ ಎದುರುದಾರನಿಗೆ ನಿರ್ದೇಶಿಸಿರುವುದು ಸಮರ್ಥನೀಯವಲ್ಲವೆಂದು ಅಭಿಪ್ರಾಯಪಟ್ಟಿದೆ.

14. ಹಿಂದೆ ಹೇಳಲಾದ ಕಾರಣಗಳಿಗಾಗಿ ನಾನು ಈ ಮುಂದಿನ ಆದೇಶವನ್ನು ಹೊರಡಿಸಲು ಮುಂದಾಗಿರುತ್ತೇನೆ.

**ಆದೇಶ**

(1) ರಿಟ್ ಅರ್ಜಿಯನ್ನು ಈ ಮೂಲಕ ಪುರಸ್ಕರಿಸಲಾಗಿದೆ.

(2) ಮೂಲ ದಾವೆ ಸಂ.170/2010 – ಅನುಬಂಧ–ಇ ನಲ್ಲಿ ಸಿವಿಲ್ ನ್ಯಾಯಾಧೀಶರು, ಜೆಎಂಎಫ್‌ಸಿ, ಪಿರಿಯಾ ಪಟ್ಟಣ ಇವರು ವಾದಕಾಲೀನ ಅರ್ಜಿ ಸಂಖ್ಯೆ.7ರಲ್ಲಿ ದಿನಾಂಕ 03.12.2014ರಂದು ಹೊರಡಿಸಿದ ಪ್ರಶ್ನಿತ ಆದೇಶವನ್ನು ರದ್ದುಗೊಳಿಸಲಾಗಿದೆ.

(3) ಸಿವಿಲ್ ಪ್ರಕ್ರಿಯಾ ಸಂಹಿತೆಯ 151ನೇ ಪ್ರಕರಣ ಅನುಬಂಧ–ಸಿ ಯೊಂದಿಗೆ ಓದಲಾದ ಸಾಕ್ಷ್ಯ ಅಧಿನಿಯಮ, 1872ನೇ ಪ್ರಕರಣದೊಂದಿಗೆ ಓದಲಾದ 45ನೇ ಪ್ರಕರಣದ ಮೇರೆಗೆ ಸಲ್ಲಿಸಿದ ವಾದ ಕಾಲೀನ ಅರ್ಜಿಯನ್ನು ವಜಾಗೊಳಿಸಲಾಗಿದೆ.

(4) ವೆಚ್ಚಗಳಿಗೆ ಸಂಬಂಧಿಸಿದಂತೆ ಯಾವುದೇ ಆದೇಶವಿರುವುದಿಲ್ಲ.

ತದನುಸಾರವಾಗಿ ಆದೇಶ ನೀಡಲಾಗಿದೆ.